
# ಪದಬಂಧ




**ಎಡದಿಂದ ಬಲಕ್ಕೆ**

1. ಅಂದು ಅಭ್ಯಂಜನ ಮಾಡಿ ಬಂದವರೆಲ್ಲ ಸುಸಂಸ್ಕೃತ ಮನುಷ್ಯರು 4
3. ವೇಳೆ ಮೀರಿ ಬಂದದ್ದಕ್ಕೆ ಎಲ್ಲವೂ ತಡವಾಯಿತು 3
4. ವಾರ್ತೆಗಳನ್ನೆಲ್ಲ ತಪ್ಪಾಗಿ ಗ್ರಹಿಸುವುದು ಅದೆಂಥ ನಡವಳಿಕೆ? 3
6. ವಾಚಾಳರನ್ನೆಲ್ಲ ಬೆರಗುಗೊಳಿಸಿದ್ದು ಒಂದು ವನ್ಯ ಪ್ರಾಣಿ 4
7. ಎಂಥ ಪೌರುಷಯುಕ್ತ ಆ 'ತಪಸ್ವಿಯ ಮಗ' ನೋಡಿದಿರಾ? 4
9. ಮನೋರಮೆ ಜಪಿಸುತ್ತಿರುವುದು ದಾಶರಥಿಯ ಹೆಸರು 4
12. ರಂಗ ಪ್ರವೇಶ ಮಾಡಿದೊಡನೆ ಆತ ಮೈಮರೆತನಲ್ಲ! 4
14. ತತ್ವಗಳ ಪರಿಪಾಲನೆ ಆರಂಭವಾಗಲಿ ಬೇಗ, ಬೇಗ 3
15. ಕರೀಮಣಿ ಧರಿಸಿದ ನಂತರ ಸಂಭವಿಸಿದ ಮುನ್ನಡೆ ಹೇಗೆ? 3
16. ರಮಾರಮಣನ ಧ್ಯಾನಕ್ಕೊಂದು ಸುಂದರ ಮನೆ 4

**ಮೇಲಿನಿಂದ ಕೆಳಕ್ಕೆ**

1. ಸಾಹುಕಾರನ ಮನೆಯಲ್ಲೂ ಸೋಪು ಮಾತ್ರ ಇದೇ 4
2. ವನದ ಸಸ್ಯಗಳ ನಾರುಗಳ ಸೀರೆಯನ್ನು ಧರಿಸಿದರೆ ಹೊಸ ಮಹಿಳೆ ಆದಾಳೇ? 4
3. ಮಾವನ ಮನೆಗೆ ಹೋಗಲು ಹಾರುವ ವಾಹನವೇ ಬೇಕೇ? 3
5. ಇಂಥವೆಲ್ಲ ಸುಂದರ ದೃಶ್ಯಗಳನ್ನು ಸೃಜಿಸಬಲ್ಲವಳು ಭೂ ಮಾತೆ ಮಾತ್ರ 4
6. ಪುನಃ ಪುನಃ ಮನದ ತುಂಬ ಅದೇ ಘಟನೆಗಳ ಸ್ಮರಣೆ 3
8. ತೃಷೆಯಿಂದ ಬಳಲಿದ್ದ ಯೋಧರ ಸಂಖ್ಯೆ ಹದಿಮೂರು 4
10. ಮರ ಹತ್ತುವ ಅಭ್ಯಾಸಕ್ಕೆ ಅಲ್ಲಿ ಭಾರೀ ಪ್ರಾಮುಖ್ಯ ಇದೆ 3
11. ಮತ್ತೇನು ಅಂತರ? ಧಾರ್ಮಿಕ ಪಂಥ ಬದಲಿಸಿದ್ದು ಆಯಿತು ತಾನೇ? 4
12. ಪರದೇಶೀಯರ ಆಕ್ರಮಣವನ್ನು ನಿಗ್ರಹಿಸಲು ಇಂಥ ಶೌರ್ಯವೇ ಬೇಕು 4
13. ಅರುಣೋದಯದ ಕಾಲದಲ್ಲೇ ಪ್ರತ್ಯಕ್ಷನಾದ ಜಲದೇವತೆ 3

---

## 13—02—2025 ಉತ್ತರಗಳು

**ಎಡದಿಂದ ಬಲಕ್ಕೆ**

1. ವಿಕಾಸ 3. ಅಂಜೂರ 4. ಮಾರುತಿ 6. ಸದನ 7. ಲಾವಾರಸ 9. ಬಕಪಕ್ಷಿ 11. ರಸಾಭಾಸ 13. ನವಸತಿ 15. ಹಾಸನ 17. ನೆರವು 18. ಮಿಲನ 19. ಗೆಲ್ಲಿಸು

**ಮೇಲಿನಿಂದ ಕೆಳಕ್ಕೆ**

1. ವಿರಸ 2. ಸಮಾನ 3. ಅಂಬರ 5. ತಿರುಕ 7. ಲಾಭಕರ 8. ಸಹವಾಸ 9. ಬಡತನ 10. ಕ್ಷಿಪ್ರಗತಿ 12. ಭಾವನೆ 14. ವದನ 15. ಹಾವುಗೆ 16. ನಮಿಸು


**ಪ್ರಶ್ನಾಂಕಣ**

# ಆಫ್ರಿಕಾದಲ್ಲಿ ಹೆಚ್ಚುತ್ತಿರುವ ದಂತರಹಿತ ಆನೆ

ಆಫ್ರಿಕಾ ಖಂಡದಲ್ಲಿ ಆನೆಗಳು ಸಮೃದ್ಧವಾಗಿರುವ ದೇಶಗಳ ರಾಷ್ಟ್ರೀಯ ಉದ್ಯಾನಗಳಲ್ಲಿ ಆನೆಗಳ, ಕೇವಲ ಹೆಣ್ಣು ಆನೆಗಳ, ಶರೀರದಲ್ಲಿ ಕೆಲ ದಶಕಗಳಿಂದ ಈಚೆಗೆ ಸಂಭವಿಸುತ್ತಿರುವ ಒಂದು ನಿಚ್ಚಳ ಮಾರ್ಪಾಡನ್ನು ಸಂಶೋಧಕರು ಗಮನಿಸಿದ್ದಾರೆ. ಅಲ್ಲೆಲ್ಲ ದಿನೇ ದಿನೇ ಹೆಚ್ಚು ಹೆಚ್ಚು ಸಂಖ್ಯೆಯ ಹೆಣ್ಣು ಆನೆಗಳಲ್ಲಿ ದಂತಗಳು ಬೆಳೆಯುತ್ತಲೇ ಇಲ್ಲ! (ಆಫ್ರಿಕನ್ ಆನೆಗಳಲ್ಲಿ ಗಂಡು ಆನೆಗಳಂತೆಯೇ ಹೆಣ್ಣು ಆನೆಗಳಲ್ಲೂ ಬೃಹತ್ ದಂತಗಳು ಬೆಳೆಯುತ್ತವೆ).

ಸಂಶೋಧಕರೇ ಪತ್ತೆ ಹಚ್ಚಿರುವಂತೆ ಯಾವ ಯಾವ ಪ್ರದೇಶಗಳಲ್ಲಿ ಮನುಷ್ಯರು ನಡೆಸಿರುವ ಅಂತರ್ಯುದ್ಧಗಳು ಮತ್ತು ಕಳ್ಳ ಬೇಟೆಗಳಂತಹ ಘೋರ ಅಕೃತ್ಯಗಳಿಗೆ ಆನೆಗಳು ಬಲಿಯಾಗಿವೆಯೋ ಅಥವಾ ಪ್ರತ್ಯಕ್ಷ ಸಾಕ್ಷಿಗಳಾಗಿವೆಯೋ ಅಂಥ ಪ್ರದೇಶಗಳಲ್ಲಿ ಬದುಕಿ ಉಳಿದ ಆನೆಗಳಿಗೆ ಹುಟ್ಟುವ ಹೆಣ್ಣು ಮರಿಗಳಲ್ಲಿ ದಂತಗಳು ಬೆಳೆಯುತ್ತಿಲ್ಲ! ಹಾಗೆಂದರೆ ಯುದ್ಧ ಅಥವಾ ಕಳ್ಳಬೇಟೆಯಿಂದ ಉಂಟಾಗುವ ಮರಣ ಭೀತಿಯ ಮಾನಸಿಕ ಒತ್ತಡಕ್ಕೆ ಒಳಗಾದ ಹೆಣ್ಣಾನೆಗಳ ಹೆಣ್ಣು ಮರಿಗಳು ದಂತರಹಿತವಾಗುತ್ತಿವೆ! ಅದನ್ನು ಸ್ಪಷ್ಟಗೊಳಿಸುವ ಈ ನಿದರ್ಶನಗಳನ್ನು ಗಮನಿಸಿ:

- ಮಧ್ಯ ಆಫ್ರಿಕಾದ, ಮೊಜಾಂಬಿಕ್ ದೇಶದ ಗೊರಂಗೋಸಾ ರಾಷ್ಟ್ರೀಯ ಉದ್ಯಾನದಲ್ಲಿ 1970ರ ದಶಕದ ಆರಂಭದಲ್ಲಿ 4000 ಆನೆಗಳಿದ್ದುವು. 1977 ರಿಂದ 1992ರವರೆಗೆ ಅಲ್ಲಿನ ಸರಕಾರ ಮತ್ತು ದಂಗೆಕೋರರ ಮಧ್ಯೆ ನಡೆದ ಉಗ್ರ ಅಂತರ್ಯುದ್ಧದಲ್ಲಿ ಸುಮಾರು 3000 ಆನೆಗಳು ದಂತಕ್ಕಾಗಿಯೂ, ಮಾಂಸಕ್ಕಾಗಿಯೂ ಕಗ್ಗೊಲೆಗೊಂಡವು. ಯುದ್ಧದ ಅವಧಿಯಲ್ಲಿ ಜನಿಸಿ ಬದುಕಿ ಉಳಿದ ಆನೆಗಳ ಶೇಕಡ 51ರಷ್ಟು ವಯಸ್ಕ ಹೆಣ್ಣಾನೆಗಳು ದಂತರಹಿತ ಆಗಿದ್ದುವು.




- ಅಷ್ಟೇ ಹಿಂದೆ ದಕ್ಷಿಣ ಆಫ್ರಿಕಾ ದೇಶದ ಅಡೋ ರಾಷ್ಟ್ರೀಯ ಉದ್ಯಾನದಲ್ಲಿ ದಂತಕ್ಕಾಗಿ ಭಾರೀ ಪ್ರಮಾಣದ ಕಳ್ಳಬೇಟೆ ನಿರಂತರ ನಡೆದಿತ್ತು. ಅಲ್ಲಿ 2000ನೇ ಇಸವಿಯಲ್ಲಿ ನಡೆಸಿದ ಆನೆ ಗಣತಿಯ ಪ್ರಕಾರ ಉಳಿದಿದ್ದ ವಯಸ್ಕ ಹೆಣ್ಣಾನೆಗಳ ಪೈಕಿ ಶೇಕಡ 98ರಷ್ಟು ದಂತರಹಿತವಾಗಿದ್ದುವು!
- ಮತ್ತೂ ಒಂದು ವಿಶೇಷ ಏನೆಂದರೆ, ಆನೆ ಸಮೃದ್ಧ ಕೀನ್ಯಾ ದೇಶದಲ್ಲಿ ಕಳ್ಳಬೇಟೆಯನ್ನು ದಾಟಿ ಉಳಿದ ಹೆಣ್ಣಾನೆಗಳಿಗೆ ಜನಿಸಿದ ಹೆಣ್ಣು ಮರಿಗಳು ವಯಸ್ಕರಾದಾಗ ಅವುಗಳ ದಂತಗಳು ಸರಾಸರಿಗಿಂತ ಶೇಕಡ 33ರಷ್ಟು ಕಡಿಮೆ ಉದ್ದಕ್ಕಷ್ಟೇ ಬೆಳೆದುವು! ಇಲ್ಲಿ ತುಂಬ ನಿಗೂಢವೂ ಕುತೂಹಲಕಾರಿಯೂ ಆದ ಎರಡು ಪ್ರಶ್ನೆಗಳಿವೆ: ಯುದ್ಧ ಅಥವಾ ಕಳ್ಳಬೇಟೆಯಿಂದ ಉದ್ಭವಿಸುವ ಮರಣ ಭೀತಿಯ ಮಾನಸಿಕ ಒತ್ತಡ ಮುಂದಿನ ತಲೆಮಾರುಗಳಲ್ಲಿ ದಂತ ರಾಹಿತ್ಯವನ್ನು ಮೂಡಿಸುತ್ತಿರುವುದು ಹೇಗೆ? ಈ ವಿದ್ಯಮಾನ ಹೆಣ್ಣು ಆನೆಗಳಿಗೆ ಮಾತ್ರ ಸೀಮಿತವಾಗಿರುವುದಾದರೂ ಏಕೆ? ಈ ಪ್ರಶ್ನೆಗಳಿಗೆ ಇನ್ನೂ ಯಾವ ಸ್ಪಷ್ಟ ಉತ್ತರವೂ ಸಿಕ್ಕಿಲ್ಲ!

■ ಎನ್. ವಾಸುದೇವ್